## ಕರ್ನಾಟಕ ಸರಕಾರ

ಸಂಖ್ಯೆ: ಡಿಪಿಎಆರ 16 ಎಸಡಿಇ 83.

ಕರ್ನಾಟಕ ಸರಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 16ನೇ ಜುಲೈ 83.

### ಅಧಿಕೃತ ಜ್ಞಾಪನ ಪತ್ರ.

ವಿಷಯ:— ಸರ್ಕಾರಿ ನೌಕರರ ಎರವಲು ಸೇವೆ — ಕಾರ್ಯನೀತಿಯ ಪುನಃ ಪರಿಶೀಲನೆ.

---

ಉಲ್ಲೇಖ:— ದಿನಾಂಕ 20—9—1975ರ ಅಧಿಕೃತ ಜ್ಞಾಪನ ಕ್ರಮಾಂಕ: ಜಿಎಡಿ 49 ಎಸ್ಆರ್ಆರ್ 75.

---

ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಗಳ ನಿಯಮ 50(3) ಮತ್ತು 419(ಬಿ) ನಿಯಮದ ಪರಂತುಕದ ಪ್ರಕಾರ ಸರ್ಕಾರದ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಯಲ್ಲಿ ಅಥವಾ ವಿದೇಶ ಸೇವೆಯಲ್ಲಿ ಸರ್ಕಾರಿ ನೌಕರರ ಎರವಲು ಸೇವೆಯ ಅವಧಿ, ಸರ್ಕಾರದ ವಿಶೇಷ ಆದೇಶಗಳ ಮೇರೆಗಲ್ಲದೇ, ಸಾಮಾನ್ಯವಾಗಿ 5 ವರ್ಷಗಳಿಗಿಂತ ಹೆಚ್ಚಾಗಿ ಇರಕೂಡದು. ಉಲ್ಲೇಖದಲ್ಲಿ ನಮೂದಿಸಿರುವ ಅಧಿಕೃತ ಜ್ಞಾಪನ ಪತ್ರದಲ್ಲಿ, ಸರ್ಕಾರಿ ನೌಕರರು ಎರವಲು ಸೇವೆಯಲ್ಲೇ ಬಹಳ ಕಾಲ ಉಳಿದರೆ ಉಂಟಾಗುವ ಪರಿಣಾಮಗಳನ್ನು ಕೂಡ ವಿವರಿಸಲಾಗಿದೆ. ವಿಶೇಷ ಕಾರಣಗಳು ಇದ್ದರೆ ಮಾತ್ರ ಈ ಸೀಮಿತ ಅವಧಿಯನ್ನು ಸರ್ಕಾರದ ವಿಶೇಷ ಆಜ್ಞೆಗಳ ಮೇರೆಗೆ ವಿಸ್ತರಿಸಲು ಅವಕಾಶವಿದೆ.

2. ಈ ರೀತಿಯ ಸ್ಪಷ್ಟ ನಿಯಮಗಳಿದ್ದರೂ ಕೂಡ 5 ವರ್ಷಗಳ ನಂತರವೂ ಎರವಲು ಸೇವೆಯ ಅವಧಿಯನ್ನು ವಿಸ್ತರಿಸಲು ಶಿಫಾರಸ್ಸುಗಳೊಡನೆ ಅನೇಕ ಪ್ರಸ್ತಾವನೆಗಳು ಬರುತ್ತಿರುವುದನ್ನು ಗಮನಿಸಿ, ಸರ್ಕಾರವು ಈ ವಿಷಯವನ್ನು ಪುನಃ ಪರಿಶೀಲಿಸಿ, ಯಾವುದೇ ಸಂಬರ್ಧದಲ್ಲೂ, ಏನೇ ವಿಶೇಷ ಕಾರಣಗಳಿದ್ದರೂ ಸರ್ಕಾರಿ ನೌಕರರನ್ನು ಎರವಲು ಸೇವೆ ಅಥವಾ ವಿದೇಶ ಸೇವೆಯಲ್ಲಿ 5 ವರ್ಷಗಳಿಗೆ ಮೀರಿ ಮುಂದುವರಿಸಲಾಗದೆಂದು ನಿಶ್ಚಿತ ನಿರ್ಣಯ ತಾಳಿ ಈ ಕೆಳಗಿನ ಸೂಚನೆಗಳನ್ನು ತಂದಿದೆ :—

ಅ) ಸರ್ಕಾರಿ ನೌಕರರ ಎರವಲು ಸೇವೆಯು, ಪ್ರಾರಂಭದ ಮೂರು ವರ್ಷ ಸಾಮಾನ್ಯ ಅವಧಿ ಮತ್ತು ಗರಿಷ್ಠ 5 ವರ್ಷಗಳಿಗೆ ಸೀಮಿತವಾಗಿರಬೇಕು.

ಆ) ಎರವಲು ಸೇವೆಯ ಗರಿಷ್ಠ ಅವಧಿ 5 ವರ್ಷ ಮುಗಿದ ಬಳಿಕ ಮಾತೃ ಸಂಸ್ಥೆಯಲ್ಲಿ ಕನಿಷ್ಠ ಎರಡು ವರ್ಷವಾದರೂ ಚಾತುರ್ಮಾಶ್ಯ ಅವಧಿ (cooling off period) ಪೂರೈಸದ ಹೊರತು ಸರ್ಕಾರಿ ನೌಕರರನ್ನು ಮತ್ತೆ ಎರವಲು ಸೇವೆಗೆ ಪ್ರತಿನಿಯೋಜಿಸಕೂಡದು.

3. ಸರ್ಕಾರದ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರುಗಳು ಇಂತಹ ಎಲ್ಲಾ ಪ್ರಕರಣಗಳಲ್ಲಿ ಮೇಲೆ ಸೂಚಿಸಿದ ಕಾರ್ಯನೀತಿಯ ಪ್ರಕಾರ ಕ್ರಮತೆಗೆದುಕೊಳ್ಳಬೇಕೆಂದು ಕೋರಲಾಗಿದೆ.

ವೈ.ಕೆ.ವೆಂಕಟೇಶನ್,
ಅಪರ ಮುಖ್ಯ ಕಾರ್ಯದರ್ಶಿ.

1) ಎಲ್ಲಾ ಕಾರ್ಯದರ್ಶಿ ಮತ್ತು ವಿಶೇಷ ಕಾರ್ಯದರ್ಶಿ,
2 ) ಎಲ್ಲಾ ಇಲಾಖಾ ಮುಖ್ಯಸ್ಥರು.
3 ) ಎಲ್ಲಾ ಉಪ/ ಅಧೀನ ಕಾರ್ಯದರ್ಶಿ / ಸಚಿವಾಲಯದ ಎಲ್ಲಾ ಶಾಖೆಗಳು.
4 ) ವಾರದ ರಾಜ್ಯ ಪತ್ರ.